ಕೆಲಸ ನಿಲ್ಲಿಸಿದವು. ಮಾತು ಕ್ರಮೇಣ ಹೆಚ್ಚು ಹೆಚ್ಚು ಅಸ್ಪಷ್ಟವಾಯಿತು. 1985ರಲ್ಲಿ ತೀವ್ರ ನ್ಯುಮೋನಿಯಾದಿಂದ ಬಳಲಿದರು. ಚಿಕಿತ್ಸೆ ಮಾಡಿದ ವೈದ್ಯರು 'ಏನೂ ಪ್ರಯೋಜನವಿಲ್ಲ, ಲೈಫ್ ಸಪೋರ್ಟ್ ಕ್ರಮವನ್ನು ನಿಲ್ಲಿಸಿಬಿಡೋಣ' ಎಂದರು. ಪತ್ನಿ ಜೇನ್ ಕೂಡ ಹತಾಶರಾಗಿ ಆಯಿತು ಎಂದು ಒಪ್ಪಿಕೊಂಡುಬಿಟ್ಟಿದ್ದರೆ, ವಿಜ್ಞಾನ ಜಗತ್ತು ಬಹಳಷ್ಟನ್ನು ಕಳೆದುಕೊಳ್ಳುತ್ತಿತ್ತು. ಆದರೆ ಜೇನ್ ಹಾಕಿಂಗ್‌ಗಿಂತಲೂ ಹಠಮಾರಿ. 'ಇಪ್ಪತ್ತೆರಡು ವರ್ಷಗಳ ಕಾಲ ಮಗುವಿನಂತೆ ಸಾಕಿದ್ದು ಇವರು ಅಸಹಾಯಕರಾಗಿ ಸಾಯುವುದನ್ನು ನೋಡುವುದಕ್ಕಲ್ಲ, ಲೈಫ್ ಸಪೋರ್ಟ್ ಸಿಸ್ಟಮ್ ಮುಂದುವರಿಯಲಿ' ಎಂದರು.

ನ್ಯುಮೋನಿಯದಿಂದ ಚೇತರಿಸಿಕೊಂಡ ಹಾಕಿಂಗ್ ಅವರಿಗೆ ಉಸಿರಾಟದ ತೊಂದರೆ ಮುಂದುವರಿಯಿತು. ಅನಿವಾರ್ಯವಾಗಿ ಶ್ವಾಸನಾಳದ ಶಸ್ತ್ರಚಿಕಿತ್ಸೆ ಮಾಡಲಾಯಿತು. ಪರಿಣಾಮವಾಗಿ ಮೊದಲು ಅಸ್ಪಷ್ಟವಾಗಿಯಾದರೂ ಹೊರಡುತ್ತಿದ್ದ ಮಾತು, ಧ್ವನಿ ಪೂರ್ತಿ ನಿಂತುಹೋಯಿತು. ಇಡೀ ದೇಹ ನಿಷ್ಕ್ರಿಯ. ಉಳಿದುಕೊಂಡಿದ್ದು ಎಂದರೆ ಕೆನ್ನೆಯ ಸ್ನಾಯುಗಳಲ್ಲಿ ಉಳಿದುಕೊಂಡಿದ್ದ ಸ್ವಲ್ಪವೇ ಸ್ವಲ್ಪ ಚಲನೆ. ಇದನ್ನಷ್ಟೇ ಆಧರಿಸಿ, ಅತ್ಯಾಧುನಿಕ ತಂತ್ರಜ್ಞಾನದ ವಿಶಿಷ್ಟ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಈಗ ಹಾಕಿಂಗ್ ಅವರ ಎಲ್ಲಾ ಬಗೆಯ ಸಂವಹನದ ಸಾಧನವಾಗಿತ್ತು. ಕಂಪ್ಯೂಟರ್‌ನಲ್ಲಿ ಒಂದೆರಡು ಅಕ್ಷರ ಟೈಪ್ ಮಾಡಿದ ಕೂಡಲೇ ಬಹುನಿರೀಕ್ಷಿತ ಪದ ಮೂಡುತ್ತಿತ್ತು; ವಾಕ್ಯ ಪೂರ್ಣಗೊಂಡ ಕೂಡಲೇ ಅದು ರೋಬೋಟಿಕ್ ಏಕತಾನತೆಯ ಧ್ವನಿಯ ರೂಪವನ್ನು ಪಡೆದು ಕೇಳಿಸುತ್ತಿತ್ತು. ಪ್ರೊ.ಹಾಕಿಂಗ್ ಇದನ್ನು ಬಳಸಿ ದಣಿಯದೇ ಮಾತಾಡಿದರು, ಓದಿದರು, ಬರೆದರು. ಇಮೇಲ್, ಬ್ರೌಸಿಂಗ್, ಸ್ಕೈಪ್ ಯಾವುದನ್ನೂ ಬಿಡದೇ ಮಾಡಿದರು.

## ವಿಕಲತೆಯನ್ನು ಗೆದ್ದ ವಿಜ್ಞಾನಿ

ತಂತ್ರಜ್ಞಾನದ ಸಹಾಯದಿಂದ ಪಡೆದ ಕನಿಷ್ಠ ಮಟ್ಟದ ನೆರವೇ ಸಾಕಾಗಿತ್ತು ಹಾಕಿಂಗ್ ಅವರಿಗೆ. ಅವರು ಸಂಶೋಧನೆ ಮುಂದುವರಿಸಿದರು, ದೇಶವಿದೇಶಗಳಿಗೆ ಹೋಗಿ ಉಪನ್ಯಾಸಗಳನ್ನು ನೀಡಿದರು. ಹತ್ತಾರು ಪುಸ್ತಕಗಳನ್ನು, ಸಂಶೋಧನಾ ಲೇಖನಗಳನ್ನು ಬರೆದರು.

'ಬೃಹತ್ ನಕ್ಷತ್ರವೊಂದು ತನ್ನ ಭಾರೀ ಗುರುತ್ವದ ಪರಿಣಾಮವಾಗಿ ತನ್ನೊಳಗೇ ಕುಸಿಯುತ್ತಾ ಕೊನೆಗೆ ಕಪ್ಪುರಂಧ್ರ (ಬ್ಲ್ಯಾಕ್ ಹೋಲ್) ಸ್ಥಿತಿಯನ್ನು ತಲುಪುತ್ತದೆ. ಗುರುತ್ವ ಎಷ್ಟೊಂದು ತೀವ್ರವಾಗಿರುತ್ತದೆ ಎಂದರೆ ಅದರಿಂದ ಬೆಳಕೂ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ; ಇದರಿಂದಾಗಿಯೇ ಅದು ನಿಗೂಢ ರೀತಿಯಲ್ಲಿ ವಿಶ್ವದಲ್ಲಿ ಒಂದು ಕಪ್ಪುರಂಧ್ರವಾಗಿ ಉಳಿದು ಬಿಡುತ್ತದೆ' ಎಂಬುದು ಖಭೌತವಿಜ್ಞಾನಿಗಳ ಅಲ್ಲಿವರೆಗಿನ ತೀರ್ಮಾನವಾಗಿತ್ತು. ಆದರೆ ಹಾಕಿಂಗ್ ತಮ್ಮ ಸಂಶೋಧನೆಗಳಿಂದ ಈ ವಿಚಾರವನ್ನು ಸುಧಾರಿಸಿ, ದ್ರವ್ಯವು ಕಪ್ಪುರಂಧ್ರದ ಗುರುತ್ವವನ್ನೂ ಮೀರಿ ವಿಕಿರಣದ ರೂಪದಲ್ಲಿ ಬಿಡುಗಡೆಯಾಗಬಲ್ಲದು ಎಂದು ಪ್ರತಿಪಾದಿಸಿದರು. ಇದು ವಿಜ್ಞಾನ ಜಗತ್ತಿನಲ್ಲಿ ಕುತೂಹಲದ ಅಲೆಯನ್ನು ಎಬ್ಬಿಸಿತು. ಇನ್ನೊಬ್ಬ ವಿಜ್ಞಾನಿ ರೋಜರ್ ಪೆನ್‌ರೋಸ್ ಎಂಬುವವರ ಜೊತೆ ಸೇರಿ ವಿಶ್ವದ ಉಗಮದ ಕುರಿತು ಸಂಶೋಧನೆಯನ್ನು ನಡೆಸಿದರು.

ಸ್ಟೀಫನ್ ಹಾಕಿಂಗ್ ವಿಜ್ಞಾನವನ್ನು ಜನಪ್ರಿಯ ಗೊಳಿಸುವುದರಲ್ಲಿಯೂ ಅದಮ್ಯ ಆಸಕ್ತಿಯನ್ನು ತೋರಿದರು. ಅವರು 1988ರಲ್ಲಿ 'ಎ ಬ್ರೀಫ್ ಹಿಸ್ಟರಿ ಆಫ್ ಟೈಮ್ ಅಂಡ್ ಸ್ಪೇಸ್' ಕುರಿತು ಸಾಮಾನ್ಯ ಓದುಗರಿಗಾಗಿ ಬರೆದ ಪುಸ್ತಕದ ಲಕ್ಷಾಂತರ ಪ್ರತಿಗಳು ಖರ್ಚಾಗಿವೆ. ಸುಮಾರು 40ಕ್ಕೂ ಹೆಚ್ಚು ಭಾಷೆಗಳಲ್ಲಿ ಅದು ಭಾಷಾಂತರಗೊಂಡಿದೆ. ಇದನ್ನೂ ಅರ್ಥ ಮಾಡಿಕೊಳ್ಳಲು ಓದುಗರಿಗೆ ಸ್ವಲ್ಪ ಕಷ್ಟವಾಗಿದೆ ಎಂಬ ಅಭಿಪ್ರಾಯ ಬಂದಾಗ, ವಿಷಯಗಳನ್ನು ಇನ್ನಷ್ಟು ಸರಳಗೊಳಿಸಿ, 'ದ ಯುನಿವರ್ಸ್ ಇನ್ ಅ ನಟ್‌ಷೆಲ್' ಮತ್ತು 'ಎ ಬ್ರೀಫರ್ ಹಿಸ್ಟರಿ ಆಫ್ ಟೈಮ್' ಎಂಬ ಪುಸ್ತಕಗಳನ್ನು ಬರೆದರು. 2010ರಲ್ಲಿ ಬರೆದ 'ದ ಗ್ರ್ಯಾಂಡ್ ಡಿಸೈನ್' ಪುಸ್ತಕದಲ್ಲಿ ವಿಶ್ವವನ್ನು ದೇವರು ಸೃಷ್ಟಿಸಿದ್ದು ಎಂಬ ವಾದವನ್ನು ವೈಜ್ಞಾನಿಕವಾಗಿ ಅಲ್ಲಗಳೆದರು. 'ವಿಶ್ವವನ್ನು ಆರಂಭಿಸಲು ದೇವರನ್ನು ಮಧ್ಯೆ ತರುವ ಅವಶ್ಯಕತೆ ಇಲ್ಲ. ವಿಶ್ವವು ಬಿಗ್ ಬ್ಯಾಂಗ್‌ನಿಂದ ಹುಟ್ಟಿತು, ಅದು ಭೌತವಿಜ್ಞಾನದ ನಿಯಮಗಳ ಅನಿವಾರ್ಯ ಪರಿಣಾಮವಾಗಿತ್ತು, ಇದನ್ನು ಬಿಟ್ಟರೆ ಇನ್ನೇನೂ ಇಲ್ಲ' ಎಂದರು.

ಸಮೂಹ ಮಾಧ್ಯಮದವರು ಇವರಿಗೆ 'ರಾಕ್ ಸ್ಟಾರ್ ಸೈಂಟಿಸ್ಟ್' ಎಂಬ ಅಡ್ಡಹೆಸರನ್ನು ಕೊಟ್ಟಿದ್ದರು. ಯಾವುದೇ ಸಂಕೋಚವಿಲ್ಲದೇ ಅವರು ಮಾಧ್ಯಮದವರೊಂದಿಗೆ ಸ್ಪಂದಿಸುತ್ತಿದ್ದರು. ದ ಸಿಂಪ್ಸನ್, (ಕಮೇಡಿಯನ್ ತಾರೆ ಜಿಮ್ ಕ್ಯಾರಿಯ) ಸ್ಟಾರ್ ಟ್ರೆಕ್: ದ ನೆಕ್ಸ್ಟ್ ಜೆನರೇಷನ್ ಮುಂತಾದ ಟಿವಿ ಷೋಗಳಲ್ಲಿ, ಸಾಕ್ಷ್ಯಚಿತ್ರಗಳಲ್ಲಿ ಭಾಗವಹಿಸಿದರು. ಅವರ ಜೀವನ ಮತ್ತು ಸಾಧನೆಯನ್ನು ಆಧರಿಸಿ ಜೇಮ್ಸ್ ಮಾರ್ಷ್ ನಿರ್ದೇಶಿಸಿ, 2014ರಲ್ಲಿ ಬಿಡುಗಡೆಯಾದ 'ದ ಥಿಯರಿ ಆಫ್ ಎವೆರಿಥಿಂಗ್' ಎಂಬ ಚಿತ್ರದಲ್ಲಿ ಹಾಕಿಂಗ್ ಪಾತ್ರವನ್ನು ಮಾಡಿದ ಎಡಿ ರೆಡ್‌ಮೇನ್ ಎಂಬ ನಟನಿಗೆ ಅತ್ಯುತ್ತಮ ನಟ ಆಸ್ಕರ್ ಪ್ರಶಸ್ತಿಯೂ ಲಭಿಸಿತು.

ಒಮ್ಮೆ ಬಾಹ್ಯಾಕಾಶದಲ್ಲಿನ ತೂಕರಹಿತ ಸ್ಥಿತಿಯ ಅನುಭವವನ್ನು ಬಯಸಿದರು. 2007ರ ಏಪ್ರಿಲ್ 26ರಂದು ತಮ್ಮ 65ನೇ ವಯಸ್ಸಿನಲ್ಲಿ ಡೈಮಂಡಿಸ್ ಝೀರೋ ಜಿ ಎಂಬ ವಿಶೇಷ ವಿಮಾನದಲ್ಲಿ ಭೂಮಿಯ ವಾತಾವರಣದಲ್ಲಿಯೇ ಶೂನ್ಯ ಗುರುತ್ವದಲ್ಲಿ ತೂಕರಾಹಿತ್ಯವನ್ನು ಅನುಭವಿಸುವ ಅವಕಾಶ ಅವರಿಗೆ ಲಭಿಸಿತು.

## ವೈಯಕ್ತಿಕ ಬದುಕೂ ಏರುಪೇರು

ಸ್ಟೀಫನ್ ಹಾಕಿಂಗ್ 1942ರ ಜನವರಿ 8ರಂದು ಇಂಗ್ಲೆಂಡಿನ ಆಕ್ಸ್‌ಫರ್ಡ್ ಎಂಬಲ್ಲಿ ಜನಿಸಿದವರು. ತಾಯಿ ಇಸೋಬೆಲ್ 1930ರ ದಶಕದಲ್ಲಿಯೇ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದವರು; ತಂದೆ ಫ್ರ್ಯಾಂಕ್ ಹಾಕಿಂಗ್ ಕೂಡ ಆಕ್ಸ್‌ಫರ್ಡ್ ಪದವೀಧರ; ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧಕ.

ಹಾಕಿಂಗ್ 17ರ ವಯಸ್ಸಿನಲ್ಲಿ ಆಕ್ಸ್‌ಫರ್ಡ್ ವಿ.ವಿ ಯುನಿವರ್ಸಿಟಿ ಕಾಲೇಜಿನಲ್ಲಿ ಪ್ರವೇಶ ಪಡೆದರು. ವಿಶ್ವ ವಿದ್ಯಾಲಯದಲ್ಲಿ ಗಣಿತದಲ್ಲಿ ಪದವಿ ಅಧ್ಯಯನ ಇರಲಿಲ್ಲ. ಅನಿವಾರ್ಯವಾಗಿ ಭೌತವಿಜ್ಞಾನ ಆಯ್ದುಕೊಂಡರು. 1962ರಲ್ಲಿ ನೈಸರ್ಗಿಕ ವಿಜ್ಞಾನದಲ್ಲಿ ಆನರ್ಸ್ ಪದವಿ ಪಡೆದರು, ಕೇಂಬ್ರಿಜ್ ವಿಶ್ವವಿದ್ಯಾಲಯದ ಟ್ರಿನಿಟಿ ಹಾಲ್‌ನಲ್ಲಿ 1965ರಲ್ಲಿ 'ಪ್ರಾಪರ್ಟೀಸ್ ಆಫ್ ಎಕ್ಸ್‌ಪ್ಯಾಂಡಿಗ್ ಯುನಿವರ್ಸ್' ಎಂಬ ವಿಷಯದ ಕುರಿತು ವಿಶ್ವವಿಜ್ಞಾನದಲ್ಲಿ ಪಿಎಚ್‌ಡಿ ಪಡೆದರು. 2017ರ ಅಕ್ಟೋಬರ್‌ನಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯವು ಇವರ ಪಿಎಚ್‌ಡಿ ಮಹಾಪ್ರಬಂಧವನ್ನು ತಮ್ಮ ವೆಬ್ ತಾಣದಲ್ಲಿ ಪ್ರಕಟಿಸಿದಾಗ, ಮೊದಲ ದಿನವೇ 60,000ಕ್ಕೂ ಹೆಚ್ಚು ಜನ ಅದನ್ನು ಓದುವ ಹವಣಿಕೆಯನ್ನು ತೋರಿದ್ದರಿಂದ ವಿಶ್ವವಿದ್ಯಾಲಯದ ಸರ್ವರ್ ಕ್ರ್ಯಾಷ್ ಆಯಿತಂತೆ. ಹಾಕಿಂಗ್ ಅವರ ರೇಡಿಯೇಷನ್ ಸಿದ್ಧಾಂತ ಪ್ರಕಟವಾಗಿ ವಿಜ್ಞಾನ ಜಗತ್ತಿನಲ್ಲಿ ರೋಮಾಂಚನವನ್ನು ಸೃಷ್ಟಿಸಿತು. 32ರ ವಯಸ್ಸಿನಲ್ಲಿ ಹಾಕಿಂಗ್ ಅವರನ್ನು ರಾಯಲ್ ಸೊಸೈಟಿಯ ಫೆಲೋ ಆಗಿ ನಾಮಕರಣ ಮಾಡಲಾಯಿತು. ನಂತರ ಅವರು ಅತ್ಯಂತ ಪ್ರತಿಷ್ಠಿತ ಆಲ್ಬರ್ಟ್ ಐನ್‌ಸ್ಟೈನ್ ಪ್ರಶಸ್ತಿಯನ್ನು ಗಳಿಸಿಕೊಂಡರು.

ತಮ್ಮ ಕಾಲೇಜಿನಲ್ಲಿಯೇ ಓದುತ್ತಿದ್ದ ಜೇನ್ ವೈಲ್ಡ್ ಎಂಬ ಯುವತಿಯನ್ನು ಪ್ರೀತಿಸಿ 1965ರಲ್ಲಿ ಮದುವೆಯಾದರು. ಈಕೆ ಹಾಕಿಂಗ್‌ರನ್ನು ಸುಮಾರು 25 ವರ್ಷಗಳ ಕಾಲ ಮಗುವಿನಂತೆ ನೋಡಿಕೊಂಡರು. ಇವರಿಗೆ ಮೂರು ಜನ ಮಕ್ಕಳು ರಾಬರ್ಟ್, ಲೂಸಿ ಮತ್ತು ತಿಮೋದಿ. ಕೆಲವು ವೈಯಕ್ತಿಕ ಕಾರಣಗಳಿಗಾಗಿ ಹಾಕಿಂಗ್ ಜೇನ್‌ರಿಂದ ವಿಚ್ಛೇದನ ಪಡೆದರು. 1990ರಲ್ಲಿ ತಮ್ಮನ್ನು ನಿರಂತರ ನೋಡಿಕೊಳ್ಳುತ್ತಿದ್ದ ನರ್ಸ್, ಇಲೇನ್ ಮೇಸನ್ ರನ್ನು ವರಿಸಿದರು. ಇದರಿಂದಾಗಿ ಮಕ್ಕಳೊಂದಿಗೆ ಮನಸ್ತಾಪವಾಯಿತು. ಕೊನೆಯಲ್ಲಿ ಅವರನ್ನೂ ವಿಚ್ಛೇದಿಸಿದರು. ಇದರ ನಂತರ ಅವರು ಮತ್ತೆ (ಬೇರೊಬ್ಬರನ್ನು ಮದುವೆಯಾಗಿದ್ದ) ತಮ್ಮ ಮೊದಲ ಪತ್ನಿಯೊಂದಿಗೆ ರಾಜಿ ಮಾಡಿಕೊಂಡರು, ಮಕ್ಕಳು ಹತ್ತಿರವಾದರು. ಮಗಳು ಲೂಸಿಯೊಂದಿಗೆ ಮಕ್ಕಳಿಗಾಗಿ ಐದು ವಿಜ್ಞಾನ ಕಾದಂಬರಿಗಳನ್ನು ಬರೆದರು.

ಸಹಜ ಹಾಸ್ಯಪ್ರಜ್ಞೆಯಿಂದ ಎಲ್ಲರಿಗೂ ಪ್ರಿಯರಾಗಿದ್ದ ವಿಶ್ವವಿಜ್ಞಾನಿ ಪ್ರೊ.ಸ್ಟೀಫನ್ ಹಾಕಿಂಗ್ ಪ್ರಸಿದ್ಧ ವಿಜ್ಞಾನಿ ಗೆಲಿಲಿಯೋರ ಮರಣದ 300ನೇ ವರ್ಷಾಬ್ದಿಯಂದು ಜನಿಸಿ, ಇನ್ನೊಬ್ಬ ಮಹಾವಿಜ್ಞಾನಿ ಐನ್‌ಸ್ಟೈನರ ಹುಟ್ಟುಹಬ್ಬದ ದಿನ ಕೊನೆಯುಸಿರೆಳೆದರು, ತಮಗೆ ಪ್ರಿಯವಾದ ವಿಶ್ವದಲ್ಲಿ ಲೀನರಾದರು.